# <u>ಹರಿವಾಸರದುಪವಾಸದ ಭಾಗ್ಯವು ಕಂಡ ಕಂಡವರಿಗೆ</u>

**Ref.:** Shri Purandara Dasara Sahitya Part – 3, Mahatmya Gnyana, edited by Shri Betageri Krishna Sharma and Shri Bengeri Huchhu Rayaru.

ರಾಗ: ಕೇದಾರ ಗೌಳ ತಾಳ: ಅಟ್ಟ

ಹರಿವಾಸರದುಪವಾಸದ ಭಾಗ್ಯವು
ದೊರಕುವುದೆ ಕಂಡ ಕಂಡವರಿಗೆ || ಪ ||

ಹಿರಿದು ಜನ್ಮಗಳಿಂದ ಹರಿಯನಾರಾಧಿಪ
ಪರಮ ಭಾಗವತ ಭಕ್ತರಿಗಲ್ಲದೆ || ಅಪ ||

ಸ್ನಾನ ಸಂಧ್ಯಾನವೆ ಮೊದಲಾದ ಕರ್ಮನ್ಯೂನದ ಪಾಪಂಗಳು
ಹೇನು ಇರುವೆ ನೊಣ ಮೊದಲಾದ ಕ್ರಿಮಿಗಳ ಹಿಂಸೆ ಮಾಡಿದ ಪಾಪವು
ದೀನತ್ವದಿಂದ ತುಚ್ಛರ ಕೈಯಿಂ ಪಡೆದ ದುರ್ದಾನದ ಪಾಪಂಗಳು
ಭಾನು ಬಿಂಬವ ಕಂಡ ಹಿಮದಂತೆ ತೊಲಗುವ ಆನಂದ ನಂದನ ವ್ರತಕೆ ಸೇರದು ಪಾಪ || 1 ||

ಪರ ಸತಿಯರ ನೋಡಿ ಮನವಿಟ್ಟ ಪಾಪವು ಪರ ದೂಷಣೆಯ ಪಾಪವು
ಪರ ಹಿಂಸೆಯ ಮಾಡಿ ಪರರ ದ್ರವ್ಯಗಳ ಅಪಹರಿಸಿದ ಬಲು ಪಾಪವು
ಪರಮಾತ್ಮನ ಹೊಗಳುವ ನಾಲಿಗೆಯಿಂದ ನರರ ಪೊಗಳುವ ಪಾಪವು
ಹರಿಯ ಮೋರೆಯ (ಮರಿಯ) ಕಂಡ ಕರಿಯ ಸಂಘಗಳಂತೆ ದುರಿತ ರಾಶಿಗಳೆಲ್ಲ ಪರಿಹರಿಸುವ ಶ್ರೀ || 2 ||

ಆಡುವ ಅನೃತ ವಾಕ್ಯಗಳಿಂದ ಅಶುಭವ ನೀಡುವ ಪಾಪಂಗಳು
ಆಡಬಾರದ ದಿನಗಳಲಿ ಸ್ತ್ರೀಗೋಷ್ಠಿಯನಾಡಿದ ಪಾಪಂಗಳು
ಬೇಡಬಾರದಂಥ ವರವನು ಕೊಡು ಎಂದು ಬೇಡಿದ ಪಾಪಂಗಳು
ಕಾಡುಗಿಚ್ಚನು ಕಂಡ ಖಗಮೃಗತತಿಯಂತೆ ಓಡಿಸುತಿರುವಂಥ ಉತ್ತಮ ವ್ರತವಿದು || 3 ||

ತೋರುವ ದಶಮಿ ದ್ವಾದಶಿಯೆಂಬ ಸಂಪುಟಾಕಾರದಿಂದೊಪ್ಪುವ ಹರಿ ದಿನವು
ಮೂರು ದಿನದ ವ್ರತ ನಾಲ್ಕು ಹೊತ್ತಿನ ಆಹಾರವು ವರ್ಜಿತವು
ಊರು ದಾರಿಗಳನ್ನು ನಡೆಯಬಾರದು ತಾಂಬೂಲವು ವರ್ಜಿತವು

ನಾರಾಯಣ ದಾಸರ ಸಂಘದೊಡನೆ ಜಾಗರ ಮಾಡಿ ಶ್ರೀ ಹರಿಯ ಕೊಂಡಾಡುವ || 4 ||

ಅತಿಶಯ ದಿನದಲ್ಲಿ ದೇವಋಷಿ ಪಿತೃ ತರ್ಪಣ ವರ್ಜಿತವು
ಪ್ರತಿ ವರುಷದಲಿ ಆಚರಿಸುವ ತಾಯ್ತಂದೆ ತಿಥಿಗಳೆಲ್ಲವು ವರ್ಜ್ಯವು
ಸತತವು ಮಾಡುವ ಯಜ್ಞ ಪುರುಷಂಗಾಹುತಿಗಳೆಲ್ಲವು ವರ್ಜ್ಯವು
ಇತರವಾದ ಭೋಗದಾಸೆಗಳೆಲ್ಲ ವರ್ಜಿಸುತಲಿ ವೀರ ವ್ರತವನಾಚರಿಸುವ || 5 ||

ಮತ್ತದು ಸಕಲ ಪಾಪಗಳಿಗೆ ಪಕ್ಷ ಪ್ರಾಯಶ್ಚಿತ್ತವು ಹರಿದಿನವು
ಉತ್ತಮವಾದ ವ್ರತಂಗಳಲೆಲ್ಲ ತಾನುತ್ತಮವಾಗಿಹುದು
ಚಿತ್ತ ಶುದ್ಧಿಯನಿತ್ತು ಜ್ಞಾನ ವೈರಾಗ್ಯಾದಿ ಮುಕ್ತಿ ಸಾಧನವೀವುದು
ಮುಕ್ತಿಗೆ ಸೋಪಾನ ತರಣಿ ಭವಾಬ್ಧಿಗೆ ಸತ್ಯ ಸನ್ನಿಧಿಗೆ ಹೆದ್ದಾರಿಯ ತೋರುವ || 6 ||

ಹಲವು ಪುರಾಣಗಳೋದಿ ಶಾಸ್ತ್ರಂಗಳ ತಿಳಿದು ಕೇಳಿದರೇನು
ಹಲವು ಪುಣ್ಯತೀರ್ಥ ನದ ನದಿಗಳಲಿ ಮೈ ಮುಳುಗಿಸಿದರೆ ಏನು
ಹಲವು ವ್ರತಂಗಳಾಚರಿಸಿ ದಾನಗಳನು ತಿಳಿದು ಮಾಡಿದರೇನು
ಹಲವು ದೈವಗಳೊಡೆಯ ಪುರಂದರ ವಿಠಲನ ಒಲುಮೆಯ ವ್ರತಕವು ಸರಿಯೆನ್ನಬಹುದೆ || 7 ||

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿಗಳು:**

ಎಲ್ಲಾ ವ್ರತಗಳಲ್ಲಿಯೂ ಏಕಾದಶಿ ವ್ರತವು ಹಿರಿದಾದುದೆಂಬುದನ್ನು ಈ ಹಾಡಿನಲ್ಲಿ ದಾಸರು ವಿವರವಾಗಿ ತಿಳಿಸಿದ್ದಾರೆ.

**ಹರಿವಾಸರ** = ಏಕಾದಶಿ

**ನ್ಯೂನ** = ಕೊರತೆ

**ದುರ್ದಾನ** = ತುಚ್ಛರ ಕೈಯಿಂದ ತೆಗೆದುಕೊಂಡ ದಾನ

**ನಂದ ನಂದನನ ವ್ರತ** = ಏಕಾದಶಿ

**ಹರಿಯ ಮರಿ** = ಸಿಂಹದ ಮರಿ

**ಕರಿಯ ಸಂಘ** = ಆನೆಗಳ ಗುಂಪು

**ಪಕ್ಷ ಪ್ರಾಯಶ್ಚಿತ್ತ** = ಹದಿನೈದು ದಿನಗಳಿಗೊಮ್ಮೆ ಮನದ ಶುದ್ಧಿಕರಣಕ್ಕಾಗಿ ಮಾಡುವ ವ್ರತ

**ತರಣಿ** = ದಾಟಿಸುವುದು - ನಾವೆ

**ಅನೃತ** = ಸುಳ್ಳು

**ಸ್ತ್ರೀ ಗೋಷ್ಠಿ** = ಸ್ತ್ರೀ ಸಂಭೋಗದ ಮಾತುಗಳು

**ಖಗ** = ಪಕ್ಷಿ

**ನದ** = ಹಿಂದುಸ್ಥಾನದ ನದಿಗಳಲ್ಲಿ ಬ್ರಹ್ಮಪುತ್ರ, ಶೋಣಭದ್ರ, ಸಿಂಧು, ಇವು ನದ ಅಥವಾ ಗಂಡು ಹೊಳೆಗಳೆನಿಸಿಕೊಳ್ಳುತ್ತವೆ

**Classification:** Keerthane
**Ankita:** purandara vittala
**Location:** NA
**Category:** Ekadashi vrata
**Sub-Category:** Ekadashi, upavasa, janma, Bhagya, bhagavatha, snana, ooru, Vishnu, deva, rushi, tayi, tande, yaga, karma, papa, patni, paramatma, nalige, nara, Krishna, kaadu, prani, vairagya, mukti, punya, purana, thirta, nadi, nada, dAna, daiva,
**Pravachana:** NA
**Explanation:** NA